# ನಿಶಾಚರಿ ಚಂದ್ರ ಪತಂಗ



ಸಂಡೂರಿನ ಸ್ಕಂದಪುರ ಬಡಾವಣೆಯಲ್ಲಿರುವ ಸ್ಕಂದಾಂಜನೇಯ ದೇವಸ್ಥಾನಕ್ಕೆ ಈಚೆಗೆ ಹೋಗಿದ್ದೆ. ಅಲ್ಲಿನ ಬಾಗಿಲ ಬಳಿ ಭಕ್ತರು ಗುಂಪುಗೂಡಿದ್ದರು. ಹತ್ತಿರ ಹೋಗಿ ನೋಡಿದಾಗ, ಶ್ವೇತ ವರ್ಣದ ಪತಂಗವೊಂದು ಬಾಗಿಲಿಗೆ ಅಳವಡಿಸಿದ್ದ ಜಾಲರಿಯ ಮೇಲೆ ಕುಳಿತಿತ್ತು. ಪತಂಗ ಸುಮಾರು ಐದು ಇಂಚು ಅಗಲದ ರೆಕ್ಕೆಗಳನ್ನು ಹೊಂದಿದ್ದು, ರೆಕ್ಕೆಗಳ ಅಂಚು ಮೀನಿನ ಬಾಲವನ್ನು ಹೋಲುತ್ತಿತ್ತು.

'ಆಕ್ಟಿಯಾಸ್ ಸೆಲೀನ್' ವರ್ಗಕ್ಕೆ ಸೇರಿದ ಪತಂಗಗಳನ್ನು 'ಇಂಡಿಯನ್ ಮೂನ್ ಮಾತ್' ಎಂದು ಕರೆಯುತ್ತಾರೆ. ಈ ಪತಂಗಗಳು ನಿಶಾಚರಿಗಳಾಗಿದ್ದು, ರಾತ್ರಿ ವೇಳೆ ಅಥವಾ ಮಂದ ಬೆಳಕಿನಲ್ಲಿ ಮಾತ್ರ ಸಕ್ರಿಯವಾಗುತ್ತವೆ. ಶ್ವೇತ ವರ್ಣವನ್ನು ಹೊಂದಿರುವ ಪತಂಗದ ರೆಕ್ಕೆಗಳ ಮೇಲೆ ಚಂದ್ರನನ್ನು ಹೋಲುವ ಗುರುತುಗಳಿರುವುದರಿಂದ 'ಇಂಡಿಯನ್ ಮೂನ್ ಮಾತ್' ಎಂದು ಕರೆಯಲಾಗುತ್ತದೆ. ಏಷ್ಯನ್ ಮೂಲದ ಈ ಪತಂಗವು ಭಾರತ, ಪಾಕಿಸ್ತಾನ, ಶ್ರೀಲಂಕಾ ಮತ್ತು ಮ್ಯಾನ್ಮಾರ್ ದೇಶಗಳಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ.

–ಜಿ.ಪದ್ಮಾ, ಸಂಡೂರು



# ಸಂಜೆಗೆ ಮೆರಗು ಸಂಜೆಮಲ್ಲಿಗೆ

ಹೂದೋಟದ ಗಿಡಗಳ ತುಂಬಾ ಹೂವುಗಳು ಅರಳಿರುವುದನ್ನು ನೋಡುವುದೇ ಕಣ್ಣಿಗೆ ಹಬ್ಬ. ಬೆಳಗ್ಗೆ ಒಂದಷ್ಟು ಹೂವುಗಳು ಅರಳಿ, ಸಂಜೆಗೆ ಬಾಡಿರುತ್ತವೆ. ಆದರೆ ಈ ಹೂವುಗಳು ಸಂಜೆಯ ಹೊತ್ತಿಗೆ ಅರಳುವುದೇ ವಿಶೇಷ. ಕರಾವಳಿಗರು ಆಸ್ಥಾನ ಹೂವು, ಬಯ್ಯಮಲ್ಲಿಗೆ ಎಂದು ಕರೆಯುವ ಸಂಜೆಮಲ್ಲಿಗೆಯ ಸಸ್ಯಶಾಸ್ತ್ರೀಯ ಹೆಸರು ಮಿರಾಬಿಲಿಸ್ ಜಲಾಪಾ. ಗೊಬ್ಬರ, ನೀರಿನ ಅಗತ್ಯವಿಲ್ಲದೆ ಬೆಳೆಯುವ ಈ ಗಿಡಗಳ ತುಂಬಾ ಹೂವು ಅರಳಿರುತ್ತವೆ. ಒಂದು ಗಿಡವಿದ್ದರೆ ಸಾಕು, ಅದರ ಬೀಜಗಳಿಂದ ಗಿಡದ ಸುತ್ತೆಲ್ಲವು ಹಲವು ಗಿಡಗಳು ಹುಟ್ಟುತ್ತವೆ. ಸಂಜೆಮಲ್ಲಿಗೆಯಲ್ಲಿ ಬಿಳಿ ಬಣ್ಣ ಮಾತ್ರವಲ್ಲದೆ ಹಳದಿ, ಕೇಸರಿ, ಪಿಂಕ್, ಕಂದು ಹೀಗೆ ಹಲವು ಬಣ್ಣಗಳ ತಳಿಗಳಿವೆ. ಈ ಗಿಡದ ಎಲೆಗಳು ಔಷಧೀಯ ಅಂಶವನ್ನು ಹೊಂದಿದ್ದು, ಊತ ಕಡಿಮೆ ಮಾಡಲು, ಹುಣ್ಣುಗಳು ಮತ್ತು ಗಾಯಗಳ ಚಿಕಿತ್ಸೆಗೆ ಬಳಸಲಾಗುತ್ತದೆ.

–ಪಂಚಮಿ ಬಾಕಿಲಪದವು, ದಕ್ಷಿಣ ಕನ್ನಡ

# ಬಾದಾಮಿ ಬೆಡಗು ಈ ದಿಡಗು

ಬಾದಾಮಿಯ ಅಗಸ್ತ್ಯ ತೀರ್ಥದ ಉತ್ತರಕ್ಕೆ ಭವ್ಯವಾದ ಬಂಡೆಗಳು, ರಣಮಂಡಲ ಕೋಟೆ, ಶಿವಾಲಯಗಳಿದ್ದರೆ, ದಕ್ಷಿಣಕ್ಕೆ ವಾಸ್ತುಶಿಲ್ಪದ ಖನಿಯಾಗಿರುವ ಮನಮೋಹಕ ಗುಹಾಲಯಗಳಿವೆ. ಪಶ್ಚಿಮದ ದಡದಲ್ಲಿ ಎಲ್ಲಮ್ಮನ ಗುಡಿಯಿದೆ. ಪೂರ್ವಕ್ಕೆ ನೀರಿನಲ್ಲಿ ತೇಲುವಂತೆ ಕಾಣುವ ಭೂತನಾಥ ಗುಡಿಗಳ ಸಂಕೀರ್ಣ, ಕುಷ್ಟುರಾಯನ ಗುಡಿ, ಮಧ್ಯೆ ವಿಶಾಲವಾದ ಜಲಾಶಯವಿದೆ. ಈ ವರ್ಷದ ಧಾರಾಕಾರ ಮಳೆಯಿಂದಾಗಿ ಗುಡ್ಡ ಮಡ್ಡಿಗಳಿಗೆಲ್ಲಾ ಹಸುರಿನ ಹೊದಿಕೆ. ನಸುಗೆಂಪು ಬಣ್ಣದ ಬಂಡೆಗಳ ಗುಡ್ಡದ ಮೇಲ್ಭಾಗದಲ್ಲಿ ಸಮತಟ್ಟಾದ ಪ್ರದೇಶ. ಇದು ಅಗಸ್ತ್ಯ ತೀರ್ಥದತ್ತ ಸ್ವಲ್ಪ ಇಳಿಜಾರಿನಿಂದ ಕೂಡಿದ್ದು, ಬಿಟ್ಟೂ ಬಿಡದೆ ಜಡಿಮಳೆ ಸುರಿದಾಗ ಸಂಗ್ರಹವಾಗುವ ನೀರು ಅಬ್ಬರಿಸುತ್ತ ಅಗಸ್ತ್ಯ ತೀರ್ಥದತ್ತ ಹರಿದುಬರುತ್ತದೆ. ಕಡಿದಾದ ಬಂಡೆಗಳ ಮೇಲೆ ಧುಮ್ಮಿಕ್ಕಿ ಬೀಳುವ ದಿಡುಗು (ಅಲ್ಪಾಯು ಜಲಪಾತ) ಸೌಂದರ್ಯ ನಯನ ಮನೋಹರ.

ಸುಮಾರು 250 ಅಡಿಗಳ ಎತ್ತರದಿಂದ ಬೀಳುವ ನೀರು ಬಂಡೆಗಳಿಗೆ ಅಪ್ಪಳಿಸಿದಾಗ ಮುತ್ತಿನ ಮಣಿಗಳನ್ನು ತೂರಿದಂತೆ ಕಾಣುವ ದೃಶ್ಯ ಆಕರ್ಷಣೀಯ. ನಂತರ ಕಲ್ಲು ಬಂಡೆಗಳ ಸಂದಿಗೊಂದಿಗಳಲ್ಲಿ ಸದ್ದು ಮಾಡುತ್ತ ನೊರೆನೊರೆಯಾಗಿ ಹರಿದು ಬರುವ ಜಲಧಾರೆ ಹಾಲಿನ ಹೊಳೆಯೇ ಉಕ್ಕಿಹರಿಯುತ್ತಿದೆಯೇನೋ ಎನ್ನುವಂತೆ ಭಾಸವಾಗುತ್ತದೆ. ಸೂರ್ಯಕಿರಣಗಳ ಚೆಲ್ಲಾಟದಿಂದ ದಿಡಗಿನ ಹಿಂದೆ ನೃತ್ಯಗೈಯುವ ಕಾಮನಬಿಲ್ಲು ಕಣ್ಮನ ತಣಿಸುವುದು. ದಿಡಗಿನ ಮಗ್ಗಲು ಜವಳು ನೆಲದಲ್ಲಿ 'ಊಟೆ' ಕೀಳುವುದರಿಂದ ಕಾಣುವ ಚಿಮ್ಮುವ ಕಾರಂಜಿಗಳ ವೈವಿಧ್ಯಮಯ ವಯ್ಯಾರ ವರ್ಣಿಸಲಸದಳ. ಈ ಬೆಡಗಿನ ದಿಡಗಿನ ಬಗ್ಗೆ ಚಾಲುಕ್ಯರ ತಾಮ್ರದ ಶಾಸನವೊಂದು ಉಲ್ಲೇಖಿಸಿದೆ.

ಗುಡ್ಡದ ಮೇಲಿಂದ ಅಬ್ಬರಿಸುತ್ತ ಧರೆಗಿಳಿಯುವ ಈ ಜಲಧಾರೆ ಎರಡು ಕವಲುಗಳಾಗಿ ಹರಿದು ಬರುವುದು. ಹೀಗಾಗಿ ಸ್ಥಳೀಯರು ಇದಕ್ಕೆ 'ಅಕ್ಕತಂಗಿ ದಿಡಗು' ಎಂದು ಕರೆಯುತ್ತಾರೆ. ಈ ವರ್ಷದ ಮಳೆ ಅನೇಕ ಸಮಸ್ಯೆಗಳಿಗೆ ಕಾರಣವಾಗಿದೆ. ಆದರೆ, ಬಾದಾಮಿಯಲ್ಲಿ ಬೆಡಗಿನ ದಿಡಗಿಗೆ ಮರು ಹುಟ್ಟು ನೀಡಿದೆ.

–ಡಾ. ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ

